

ಸೊಸೆ ಪೂಜಾ ಅವರ ಜೊತೆಗೆ ಕಾಮಿನಿ ರಾವ್

**ಡಾ. ಕಾಮಿನಿ ರಾವ್ ಹೊಸ ಕನಸು**

# ದೃಶ್ಯ ಮಾಧ್ಯಮದ ಮೂಲಕ ಸಮಾಜಕ್ಕೆ ಸರ್ಜರಿ

**ಪ್ರಸಿದ್ಧ ಸ್ತ್ರೀರೋಗ ತಜ್ಞೆ ಕಾಮಿನಿ ರಾವ್ ಚಿತ್ರ ನಿರ್ಮಾಣ ಸಂಸ್ಥೆ ಆರಂಭಿಸಿದ್ದಾರೆ. 'ಪೂರ್ವಿ ಪ್ರೊಡಕ್ಷನ್' ಎಂಬ ಹೆಸರಿನ ಈ ನಿರ್ಮಾಣ ಸಂಸ್ಥೆಯ ಮೂಲಕ ಸಾಧಕರ ಸಂದರ್ಶನ, ಮಾತು – ಕತೆ – ಪದ್ಯಗಳನ್ನು ಒಳಗೊಂಡ ವಿಭಿನ್ನ ಹರಟೆಕಟ್ಟೆಯನ್ನು ಆರಂಭಿಸಿರುವ ಅವರಿಗೆ, ಕಿರುಚಿತ್ರ ಮತ್ತು ಪೂರ್ಣಪ್ರಮಾಣದ ಚಿತ್ರಗಳ ನಿರ್ಮಾಣದ ಯೋಜನೆಯನ್ನೂ ಹಾಕಿಕೊಂಡಿದ್ದಾರೆ.**

■ ಮಾಂಟೊ

ಸ್ತ್ರೀರೋಗ ತಜ್ಞೆಯಾಗಿ ವಿಖ್ಯಾತರಾದ ಡಾ. ಕಾಮಿನಿ ರಾವ್, ವೈದ್ಯವನ್ನಷ್ಟೇ ಮಾಡುತ್ತಿದ್ದರೆ ಇಷ್ಟು ವಿಖ್ಯಾತರಾಗುತ್ತಿರಲಿಲ್ಲವೇನೋ. ಆದರೆ ವೈದ್ಯಕೀಯಕ್ಕೆ ಮಾನವೀಯ ಸ್ಪರ್ಶ ನೀಡಿದ ಅವರು, ಸಾವಿರಾರು ಜನರಿಗೆ 'ಸಾರ್ಥಕ ಅಮ್ಮ'ನಾದವರು. ಈಗ ಕಾಮಿನಿ ಅವರ ವ್ಯಕ್ತಿತ್ವದ ಹಿರಿವೃಕ್ಷಕ್ಕೆ ಇನ್ನೊಂದು ಚಿಗುರು ಸೇರಿಕೊಂಡಿದೆ. ಅವರೀಗ ನಿರ್ಮಾಣ ಸಂಸ್ಥೆಯನ್ನು ಆರಂಭಿಸಿದ್ದಾರೆ. ಲಾಭದ ಲವಲೇಶವೂ ಇಲ್ಲದೆ, ನೂರಾರು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುತ್ತಿರುವ, ಹಲವಾರು ಜನರಿಗೆ ಬದುಕು ಕಲ್ಪಿಸಿರುವ ಇವರು ನಿರ್ಮಾಣ ಸಂಸ್ಥೆ ಆರಂಭಿಸಿರುವುದರ ಹಿಂದೆ ಇರುವುದೂ ಸಾಮಾಜಿಕ ಜಾಗೃತಿಯ ಸದುದ್ದೇಶವೇ.

ಕಾಮಿನಿ ರಾವ್ ಅವರ ಈ ಪ್ರಯತ್ನದ ಹಿಂದೆ ಅವರ ಸೊಸೆ ಪೂಜಾ ಸಿದ್ಧಾರ್ಥ ರಾವ್ ಅವರ ಬೆಂಬಲದ ಬಲವೂ ಇದೆ. ಹಾಗೆ ನೋಡಿದರೆ ನಿರ್ಮಾಣ ಸಂಸ್ಥೆಯ ಆಲೋಚನೆ ಮೊದಲು ಬಂದಿದ್ದು ಪೂಜಾ ಅವರಿಗೇ.

'ನಾನು ಇವೆಂಟ್ ಮ್ಯಾನೇಜ್ಮೆಂಟ್ ಕಂಪನಿ ನಡೆಸುತ್ತೇನೆ. ಸದಾ ಕೆಲಸದಲ್ಲಿ ಬ್ಯುಸಿಯಾಗಿ, ಹೊರಗಡೆ ಓಡಾಡಿಕೊಂಡು ಇದ್ದವಳು. ಲಾಕ್‌ಡೌನ್ ಸಮಯದಲ್ಲಿ ಎರಡು ಮೂರು ವಾರ ಕಳೆಯುವಷ್ಟರಲ್ಲಿ ಸಾಕಾಗಿ ಹೋಯ್ತು. ಪಂಜರದ ಹಕ್ಕಿಯ ಬದುಕನ್ನು ಬದುಕುವುದು ಸಾಧ್ಯವೇ ಇಲ್ಲ ಅನಿಸಿತು.ಒಂದು ದಿನ ಅತ್ತೆ ಕಾಮಿನಿ ರಾವ್ ಅವರ ಎದುರು ಕೂತು ಅತ್ತುಬಿಟ್ಟೆ. ಆ ಸಮಯದಲ್ಲಿ ಅವರು ಏನೋ ಬರೆಯುತ್ತಿದ್ದರು. ಕರೆದು ಹತ್ತಿರ ಕೂಡಿಸಿಕೊಂಡರು. ನಮ್ಮ ಮನಸ್ಸನ್ನು ನಾವು ಹೇಗೆ ನಿಯಂತ್ರಣದಲ್ಲಿ ಇರಿಸಿಕೊಳ್ಳಬೇಕು ಎಂದು ತಿಳಿಹೇಳಿದರು. ಅವರು ಮಾತನಾಡುತ್ತಿದ್ದಷ್ಟೂ ಹೊತ್ತು ನಾನು ಅಕ್ಷರಶಃ ಕಳೆದೇಹೋಗಿದ್ದೆ. ಅವರ ಮಾತಿನಲ್ಲಿ ಅಂಥ ಶಕ್ತಿ ಇತ್ತು. ಮರುದಿನ ಬೆಳಿಗ್ಗೆ ಏಳುವಷ್ಟರಲ್ಲಿ ಮನಸ್ಸು ನಿರಾಳವಾಗಿತ್ತು. ಅವರಿಗೆ ಒಂದೇ ದಿನದಲ್ಲಿ ನನ್ನ ಆಲೋಚನೆ, ಬದುಕನ್ನು ನೋಡುವ ರೀತಿ ಎಲ್ಲವನ್ನೂ ಬದಲಾಯಿಸಲು ಸಾಧ್ಯವಾದರೆ